# 10ನೇ ತರಗತಿ ಸಮಾಜವಿಜ್ಞಾನ ವಿಷಯದ ಒಂದು ಅಂಕದ ಕ್ಲಿಷ್ಟ/ಅನ್ವಯಿಕ ಪ್ರಶ್ನೋತ್ತರ ಮಾಲಿಕೆ.


- ಶ್ರೀ ಸುರೇಶ್. ದೊಡಮನಿ. ಸ. ಶಿ.
  ಸರ್ಕಾರಿ ಪ್ರೌಢ ಶಾಲೆ, ಬಾಬಾನಗರ.
  ತಾ.ಜಿ.ವಿಜಯಪುರ.
  ದೂರವಾಣಿ ಸಂಖ್ಯೆ : 7899778812

# ಮುನ್ನುಡಿ

ಆತ್ಮೀಯರೇ,

10ನೇ ತರಗತಿಯ ವಿದ್ಯಾರ್ಥಿಗಳಿಗೆ ಸಮಾಜವಿಜ್ಞಾನ ವಿಷಯದಲ್ಲಿ ಹೆಚ್ಚಿನ ಅಂಕಗಳಿಕೆಗಾಗಿ ಈಗಾಗಲೇ ಹತ್ತು ಹಲವಾರು ಕ್ರಮಗಳನ್ನು ಕೈಗೊಂಡರೂ ಕೂಡ ನಿರೀಕ್ಷಿತ ಫಲಿತಾಂಶ ಪಡೆಯುವಲ್ಲಿ ವಿದ್ಯಾರ್ಥಿಗಳು ವಿಫಲವಾಗುತ್ತಿರುವುದನ್ನು ವಿಶ್ಲೇಷಿಸಿದಾಗ ಒಂದು ಅಂಕದ ಪ್ರಶ್ನೆ(ವಿಶೇಷವಾಗಿ ಒಂದು ವಾಕ್ಯದಲ್ಲಿ ಉತ್ತರಿಸುವ)ಗಳನ್ನು ಉತ್ತರಿಸುವಾಗ ಎಡವುತ್ತಿರುವುದು ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಒಂದು ಅಂಕದ ಪ್ರಶ್ನೆಗಳ ಸ್ವರೂಪವನ್ನು ಪರಿಚಯಿಸಿ, ಪ್ರಶ್ನೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ನಿಖರವಾದ ಉತ್ತರವನ್ನು ಬರೆಯುವ ಕೌಶಲವನ್ನು ಬೆಳೆಸುವ ಉದ್ದೇಶದಿಂದ ಎಲ್ಲ ಆರೂ ವಿಭಾಗಗಳಿಗೆ ಸಂಬಂಧಿಸಿದಂತೆ ಕೆಲವು ಕ್ಲಿಷ್ಟ/ಅನ್ವಯನ ಮಾದರಿ ಪ್ರಶ್ನೆಗಳನ್ನು ಉತ್ತರಗಳೊಂದಿಗೆ ನಿಮ್ಮ ಮುಂದಿಡುತ್ತಿದ್ದೇನೆ. ಇವುಗಳು ಎಲ್ಲ ಮಕ್ಕಳಿಗೆ ತಲುಪಲಿ, ಪರೀಕ್ಷೆ ಬರೆಯುತ್ತಿರುವ ಎಲ್ಲ ಮಕ್ಕಳು ಉತ್ತಮವಾದ ಫಲಿತಾಂಶ ಪಡೆಯಲಿ ಎಂದು ಆಶಿಸುತ್ತಾ ಇದಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆಗಳಿದ್ದಲ್ಲಿ ಮುಕ್ತವಾಗಿ ಹಂಚಿಕೊಳ್ಳುವಿರೆಂದು ಭಾವಿಸುತ್ತೇನೆ.

ಧನ್ಯವಾದಗಳೊಂದಿಗೆ,

ನಿಮ್ಮವನಾದ,

ಶ್ರೀ ಸುರೇಶ್. ದೊಡಮನಿ. ಸ.ಶಿ.

1. ಕಾನ್‌ಸ್ಟಾಂಟಿನೋಪಲ್ ಯೂರೋಪಿನ ವ್ಯಾಪಾರದ ಹೆಬ್ಬಾಗಿಲು ಎಂದು ಏಕೆ ಪರಿಗಣಿಸಲ್ಪಟ್ಟಿತ್ತು?
   - ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗಿದ್ದರಿಂದ
2. ಫ್ರಾನ್ಸಿಸ್ಕೋ ಡಿ ಅಲ್ಮೇಡ್ ನೀಲಿ ನೀರಿನ ನೀತಿಯನ್ನು ಜಾರಿಗೆ ತರಲು ಕಾರಣವೇನು?
   - ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸಲು
3. ಮೊದಲನೇ ಕರ್ನಾಟಿಕ್ ಯುದ್ಧಕ್ಕೆ ಕಾರಣವೇನು?
   - ಫ್ರೆಂಚ್ ಸೇನಾ ಮುಖ್ಯಸ್ಥ ಲಾಬೋರ್ಡಿನಾ ಬ್ರಿಟಿಷ್‌ರಿಂದ ಮದ್ರಾಸ್‌ನ್ನು ವಶಪಡಿಸಿಕೊಂಡಿದ್ದು.
4. ಲಾರ್ಡ್ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೊಳಿಸಿದ ಉದ್ದೇಶವೇನು?
   - ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸುವುದು.
5. ಎರಡನೇ ಆಂಗ್ಲೋ ಮರಾಠಾ ಯುದ್ಧಕ್ಕೆ ಕಾರಣವೇನು?
   - ಮರಾಠಾ ಮನೆತನಗಳ ನಾಯಕರ ನಡುವಿನ ಸಂಘರ್ಷ
6. ಡಾಲ್ ಹೌಸಿ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೊಳಿಸಲು ಕಾರಣವೇನು?
   - ಭಾರತೀಯ ರಾಜನಿಗೆ ಪುತ್ರರಿಲ್ಲದ ರಾಜ್ಯಗಳನ್ನು ಬ್ರಿಟೀಷ್ ಸಾಮ್ರಾಜ್ಯಕ್ಕೆ ವಿಲೀನಗೊಳಿಸುವ ಉದ್ದೇಶದಿಂದ
7. ಲಾರ್ಡ್ ಕಾರ್ನವಾಲೀಸ್ ಕಲ್ಕತ್ತದಲ್ಲಿ ಪೋರ್ಟ ವಿಲಿಯಂ ಕಾಲೇಜನ್ನು ಸ್ಥಾಪಿಸಿದ ಉದ್ದೇಶವೇನು?
   - ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣ ನೀಡಲು
8. ಲಾರ್ಡ್ ಕಾರ್ನವಾಲೀಸ್ ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತರಲು ಕಾರಣವೇನು?
   - ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣ ಪಡೆಯಲು
9. ಮೆಕಾಲೆ ಯೋಜನೆ(ಶಿಕಣ ನೀತಿ)ಯ ಪ್ರಮುಖ ಉದ್ದೇಶವೇನಾಗಿತ್ತು?
   - ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ, ಅಭಿರುಚಿ, ಅಭಿಪ್ರಾಯ, ನೀತಿ & ಬುದ್ಧಿವಂತಿಕೆಯಲ್ಲಿ ಇಂಗ್ಲೀಷ್ ರಾಗುವ ಭಾರತೀಯ ವಿದ್ಯಾವಂತ ವರ್ಗದ ಸೃಷ್ಟಿ ಮಾಡುವುದು.
10. ರೆಗ್ಯುಲೇಟಿಂಗ್ ಕಾಯ್ದೆ ಜಾರಿಯ ಉದ್ದೇಶವೇನು?
    - ಬ್ರಿಟೀಷ್ ಕಂಪನಿಯನ್ನು ಒಳಗೊಂಡಂತೆ ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವುದು
11. 1935ರ ಭಾರತ ಸರ್ಕಾರದ ಕಾಯ್ದೆಯನ್ನು ಭಾರತದ ಸಂವಿಧಾನದ ಬುನಾದಿ ಎಂದು ಏಕೆ ಕರೆಯುವರು?
    - ಭಾರತದ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನು ಆಧರಿಸಿ ರಚಿಸಲಾಗಿದೆ.
12. ಭಾರತದ ಚರಿತ್ರೆಯಲ್ಲಿ 18ನೇ ಶತಮಾನವು ರಾಜಕೀಯ ಸಮಸ್ಯೆಗಳ ಶತಮಾನವೆಂದು ಚಿತ್ರಿಸಲ್ಪಟ್ಟಿದೆ. ಪ್ರಮುಖ ಕಾರಣವೇನು?
    - 1707ರಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ
13. ಎರಡನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣವೇನು?
    - ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು
14. ಮೂರನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣವೇನು?
    - ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ
15. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣವೇನು?
    - ಅಮಾನವೀಯ & ಅಸಮಾನ ಷರತ್ತುಗಳನ್ನು ಒಳಗೊಂಡಿದ್ದ ಒಪ್ಪಂದಕ್ಕೆ ಟಿಪ್ಪು ನಿರಾಕರಿಸಿದ್ದು
16. ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ದಂಗೆ ಎದ್ದರು?
    - ಶಸ್ತ್ರಾಸ್ತ್ರ ಬಳಕೆಯನ್ನು ನಿರ್ಬಂಧಿಸುವ ಕಾಯ್ದೆಯನ್ನು ಜಾರಿಗೊಳಿಸಿದ್ದರಿಂದ
17. 19ನೇ ಶತಮಾನವನ್ನು ಭಾರತದ ಚರಿತ್ರೆಯಲ್ಲಿ ಸಮಾಜ ಸುಧಾರಣಾ ಕಾಲ/ಭಾರತದ ನವೋದಯಕಾಲವೆಂದು ಏಕೆ ಕರೆಯಲಾಗಿದೆ?
    - ಇಂಗ್ಲಿಷ್ ಶಿಕ್ಷಣದಿಂದ ಭಾರತೀಯ ವಿದ್ಯಾವಂತ ವರ್ಗ ಸೃಷ್ಟಿ
18. ಬ್ರಿಟಿಷರು ಬಿಳಿಯನ ಮೇಲಿನ ಹೊರೆ ಸಿದ್ಧಾಂತವನ್ನು ಪ್ರಚುರಪಡಿಸಲು ಕಾರಣವೇನು?
    - ಬ್ರಿಟಿಷರು ತಮ್ಮ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಯೋಜನೆ ಹೊಂದಿದ್ದರು

19. ರಾಮ ಮೋಹನರಾಯರು ಆತ್ಮೀಯ ಸಭಾ ಸ್ಥಾಪಿಸಿದ ಉದ್ದೇಶವೇನು?
   ➢ ಧಾರ್ಮಿಕ & ಸಾಮಾಜಿಕ ಪಿಡುಗನ್ನು ಬಂಗಾಳ ಸಮಾಜದಿಂದ ಕೊನೆಗೊಳಿಸುವುದು.
20. ದಯಾನಂದ ಸರಸ್ವತಿಯವರು ವೇದಗಳಿಗೆ ಮರಳಿ ಎಂದು ಘೋಷಿಸಲು ಕಾರಣವೇನು?
   ➢ ಭಾರತದ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿರುವುದರಿಂದ
21. ದಯಾನಂದ ಸರಸ್ವತಿಯವರು ಶುದ್ಧಿ ಚಳುವಳಿಯನ್ನು ಏಕೆ ಪ್ರಾರಂಭಿಸಿದರು?
   ➢ ಹಿಂದೂ ಧರ್ಮದಿಂದ ಇಸ್ಲಾಂ & ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರನ್ನು ಮತ್ತೆ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳಲು
22. ರಾಮಕೃಷ್ಣ ಮಿಷನ್ ಸ್ಥಾಪನೆಯ ಉದ್ದೇಶವೇನು?
   ➢ ರಾಮಕೃಷ್ಣ ಪರಮಹಂಸರ ಚಿಂತನೆ & ಆಶಯಗಳನ್ನು ಜನರಿಗೆ ತಲುಪಿಸಲು
23. ಥಿಯೋಸಾಫಿಕಲ್ ಸೊಸೈಟಿಯ ಪ್ರಮುಖ ಉದ್ದೇಶವೇನು?
   ➢ ವಿವಿಧ ಧರ್ಮಗಳು, ದರ್ಶನಗಳು & ವಿಜ್ಞಾನಗಳ ತುಲನಾತ್ಮಕ ಅಧ್ಯಯನ ಮಾಡುವುದು.
24. ಅನಿಬೆಸೆಂಟ್‌ರನ್ನು ಶ್ವೇತ ಸರಸ್ವತಿ ಎಂದು ಏಕೆ ಕರೆಯಲಾಗಿದೆ?
   ➢ ಭಗವದ್ಗೀತೆಯನ್ನು ಇಂಗ್ಲಿಷ್ ಗೆ ಭಾಷಾಂತರಿಸಿದ್ಧರಿಂದ
25. ಧರ್ಮ ಪರಿಪಾಲನಾ ಯೋಗಂ ಸಂಸ್ಥೆಯ ಪ್ರಮುಖ ಧ್ಯೇಯೋದ್ದೇಶವೇನು?
   ➢ ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ
26. ನಾರಾಯಣಗುರುಗಳ ಪ್ರಮುಖ ಆಶಯವೇನಾಗಿತ್ತು?
   ➢ ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು
27. ನಾರಾಯಣಗುರುಗಳು ವೈಕಂ ಚಳುವಳಿಯನ್ನು ಏಕೆ ಪ್ರಾರಂಭಿಸಿದರು?
   ➢ ದೇವಾಲಯ ಪ್ರವೇಸಿಸುವ ಉದ್ಧೇಶದಿಂದ
28. ಭಾರತದ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಲು ಕಾರಣವೇನು?
   ➢ ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ
29. 1857ರ ದಂಗೆಗೆ ತಕ್ಷಣದ ಕಾರಣವೇನು?
   ➢ ಸೈನಿಕರಿಗೆ ನೀಡುತ್ತಿದ್ದ ರಾಯಲ್ ಎನ್‌ಫೀಲ್ಡ್ ಬಂದೂಕುಗಳಿಗೆ ಹಸು ಮತ್ತು ಹಂದಿಯ ಕೊಬ್ಬು ಸವರಿದ್ದಾರೆಂಬ ವದಂತಿ
30. ಮಂಗಲ್ ಪಾಂಡೆ ಬ್ರಿಟಿಷ್ ಸೈನ್ಯಾಧಿಕಾರಿಯನ್ನು ಏಕೆ ಕೊಂದನು?
   ➢ ಹಸು ಮತ್ತು ಹಂದಿಯ ಕೊಬ್ಬು ಸವರಿದ್ದ ತುಪಾಕಿಯನ್ನು ಹಲ್ಲಿನಿಂದ ಕಚ್ಚಿ ತೆರೆಯುವಂತೆ ಆದೇಶೀಸಿದ್ದರಿಂದ
31. ಲಕ್ಷ್ಮೀ ಬಾಯಿಯು ಬ್ರಿಟಿಷ್ ರ ವಿರುದ್ಧ ಏಕೆ ಯುದ್ಧ ಸಾರಿದಳು?
   ➢ ಬ್ರಿಟಿಷ್ ರ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ವಿರೋಧಿಸಿ
32. ನಿರುದ್ಯೋಗವು ಭಾರತಕ್ಕೆ ಸವಾಲಾಗಿ ಪರಿಣಮಿಸಿದೆ. ಏಕೆ?
   ➢ ಭಾರತವು ಮಿತಿಮೀರಿದ ಜನಸಂಖ್ಯೆಯನ್ನು ಹೊಂದಿರುವುದರಿಂದ
33. ಕರ್ನಾಟಕದಲ್ಲಿ ಡಾ. ಡಿ. ಎಂ. ನಂಜುಡಪ್ಪ ಸಮಿತಿಯನ್ನು ರಚಿಸಲು ಕಾರಣವೇನು?
   ➢ ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನ ಹೋಗಲಾಡಿಸಲು
34. ಕರ್ನಾಟಕ ಸರ್ಕಾರವು ಸ್ತ್ರೀ ಶಕ್ತಿ ಯೋಜನೆಯನ್ನು ಏಕೆ ಜಾರಿಗೊಳಿಸಿದೆ?
   ➢ ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ
35. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಆಯೋಗ ಸ್ಥಾಪನೆಯ ಉದ್ದೇಶವೇನು?
   ➢ ಮಹಿಳೆಯರ ದೂರು ದುಮ್ಮಾನಗಳನ್ನು ಪರಿಶೀಲಿಸಿ ನ್ಯಾಯ ದೊರಕಿಸಿಕೊಡುವುದು
36. ಕಾರ್ಪೋರೇಟ್ ತಂತ್ರಗಾರಿಕೆಯ ಪ್ರಮುಖ ಉದ್ದೇಶವೇನು?
   ➢ ಲಾಭಗಳಿಸುವುದು.
37. ಲೋಕಪಾಲ ಮತ್ತು ಲೋಕಾಯುಕ್ತ ಸಂಸ್ಥೆಗಳನ್ನು ಏಕೆ ಸ್ಥಾಪಿಸಲಾಗಿದೆ?
   ➢ ಭ್ರಷ್ಟಾಚಾರ ನಿಯಂತ್ರಣ
38. ಭಾರತವು ಒಂದು ಸಾರ್ವಭೌಮ ರಾಷ್ಟ್ರವೆಂದು ಹೇಗೆ ಹೇಳುವಿರಿ?
   ➢ ಭಾರತವು ಆಂತರಿಕವಾಗಿ ಹಾಗೂ ಬಾಹ್ಯವಾಗಿ ಸ್ವತಂತ್ರವಾಗಿದೆ.
39. ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ಏಕೆ ಕರೆಯಲಾಗಿದೆ?

- ಭಾರತದ ಮೊದಲ ಪ್ರಧಾನಿಯಾದ ನೆಹರೂರವರು ವಿದೇಶಾಂಗ ಖಾತೆಯನ್ನು ವಹಿಸಿಕೊಂಡು ಸಮರ್ಥವಾಗಿ ನಿಭಾಯಿಸಿದರು

40. ಭಾರತವು ವಿಶ್ವದ ಯಾವುದೇ ಶಕ್ತಿ ಬಣಕ್ಕೂ ಸೇರದೇ ಅಲಿಪ್ತ ನೀತಿ ಅನುಸರಿಸಿತು.ಏಕೆ?
    - ಎರಡೂ ಬಣಗಳ ವಿಶ್ವಾಸಗಳಿಸುವ ಉದ್ಧೇಶ ಹೊಂದಿತ್ತು.
41. ಭಾರತದ ವಿದೇಶಾಂಗ ನೀತಿಯು ವಸಾಹತುಶಾಹಿತ್ವವನ್ನು ವಿರೋಧಿಸಲು ಕಾರಣವೇನು?
    - ಭಾರತವು ಬ್ರಿಟಿಷ್ ವಸಾಹತುಶಾಹಿತ್ವವನ್ನು ವಿರೋಧಿಸಿ ಸ್ವಾತಂತ್ರ್ಯಗಳಿಸಿಕೊಂಡ ರಾಷ್ಟ್ರವಾಗಿರುವುದರಿಂದ.
42. ವರ್ಣಭೇದ ನೀತಿಯು ಮಾನವತಾವಾದಕ್ಕೆ ವಿರುದ್ಧವಾದುದು. ಹೇಗೆ?
    - ವರ್ಣಭೇದ ನೀತಿಯು ಅಮಾನವೀಯವಾದುದು & ಇದು ಮಾನವ ಹಕ್ಕುಗಳನ್ನು ಉಲ್ಲಂಘಿಸಿ ವಿಶ್ವಶಾಂತಿ & ಸಹಬಾಳ್ವೆಗೆ ಮಾರಕವಾಗಿದೆ.
43. ನೆಲ್ಸನ್ ಮಂಡೇಲಾರವರನ್ನು ಆಫ್ರಿಕಾದ ಗಾಂಧಿ ಎಂದು ಏಕೆ ಕರೆಯುತ್ತಾರೆ?
    - ದಕಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದರು.
44. ಶಸ್ತ್ರಾಸ್ತ್ರ ಪೈಪೋಟಿಯು ವಿಶ್ವದ ಹಲವು ರಾಷ್ಟ್ರಗಳಲ್ಲಿ ಆತಂಕವನ್ನು ಸೃಷ್ಟಿಮಾಡಲು ಕಾರಣವೇನು?
    - ಮೂರನೇ ಮಹಾಯುದ್ಧ ನಡೆಯುವ ಆತಂಕ
45. ಭಾರತವು ಯಾವ ಬಗೆಯ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ?
    - ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣ
46. ಭಾರತವು ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ. ಏಕೆ?
    - ಸಂಪೂರ್ಣ ನಿಶ್ಯಸ್ತ್ರೀಕರಣ ಅಸಾದ್ಯ ಏಕೆದಂರೆ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಕ್ಷಣಾವ್ಯೂಹ ಅಗತ್ಯ.
47. ಭಾರತ ಮತ್ತು ಚೀನಾ ನಡುವಿನ ಸಂಬಂಧಗಳು ಮತ್ತಷ್ಟು ಕಗ್ಗಂಟಾಗಲು ಕಾರಣವೇನು?
    - ಚೀನಾವು ಭಾರತದ ಭಾಗವಾಗಿರುವ ಅರುಣಾಚಲ ಪ್ರದೇಶ ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿರುವುದು.
48. ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ ಎಂದು ಕರೆಯಲು ಕಾರಣವೇನು?
    - ಭಾರತದ ಸಂವಿಧಾನದ ಕರಡು ರಚನೆಯಲ್ಲಿ ನಿರ್ಣಾಯಕವಾದ & ಮಹತ್ವದ ಪಾತ್ರ ನಿರ್ವಹಿಸಿದ್ದರಿಂದ
49. ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಗಿದೆ?
    - ಅಸ್ಪೃಶ್ಯತಾ ಆಚರಣೆಯನ್ನು ತಡೆಗಟ್ಟುವುದು ಹಾಗೂ ತಪ್ಪಿತಸ್ಥರಿಗೆ ಶಿಕ್ಷಿಸುವುದು.
50. 21 ಎ ವಿಧಿಯು ಶಿಕ್ಷಣ ವಂಚಿತ ಮಕ್ಕಳ ಬದುಕಿನಲ್ಲಿ ಹೊಸ ಆಶಾ ಭಾವನೆ ಮೂಡಿಸಿದೆ. ಏಕೆ?
    - ಈ ವಿಧಿಯು 6–14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ & ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ.
51. ವಿಶೇಷ ಪರಿಣತಿಗೆ ಕಾರಣವೇನು?
    - ಶ್ರಮ ವಿಭಜನೆ
52. ಸಂಭಾವನೆ ಸಹಿತ ದುಡಿಮೆಯು ಸಂಭಾವನೆ ರಹಿತ ದುಡಿಮೆಗಿಂತ ಹೇಗೆ ಭಿನ್ನವಾಗಿದೆ?
    - ಮೊದಲನೇಯದು ಆರ್ಥಿಕ ಪ್ರತಿಫಲಕ್ಕಾಗಿ ಮಾಡುವ ಕಾರ್ಯವಾಗಿದ್ದರೆ ಎರಡನೇಯದು ಆತ್ಮ ಸಂತೋಷಕ್ಕಾಗಿ ಮಾಡುವ ಕಾರ್ಯವಾಗಿದೆ.
53. ಸಂಘಟಿತ ದುಡಿಮೆಗಾರರು ಅಸಂಘಟಿತ ದುಡಿಮೆಗಾರರಿಗಿಂತ ಹೇಗೆ ಭಿನ್ನರಾಗಿದ್ದಾರೆ?
    - ಸಂಘಟಿತ ದುಡಿಮೆಗಾರರು ನಿರ್ದಿಷ್ಟ ಕಾನೂನು, ವೇತನ, ವಿವಿಧ ಸೌಲಭ್ಯ ಹೊಂದಿದ್ದರೆ ಅಸಂಘಟಿತ ದುಡಿಮೆದಾರರು ಇವುಗಳನ್ನು ಹೊಂದಿರುವುದಿಲ್ಲ.
55. ಮಹಾ ಹಿಮಾಲಯವನ್ನು ಹಿಮಾದ್ರಿ ಎಂದು ಕರೆಯಲು ಕಾರಣವೇನು?
    - ಮಹಾ ಹಿಮಾಲಯವು ವರ್ಷ ಪೂರ್ತಿ ಹಿಮದಿಂದ ಆವೃತವಾಗಿರುವುದರಿಂದ
56. ಉತ್ತರ ಮೈದಾನವು ಹೇಗೆ ರಚನೆಗೊಂಡಿದೆ?
    - ಸಟ್ಲೇಜ್, ಗಂಗಾ & ಬ್ರಹ್ಮಪುತ್ರ ನದಿಗಳ ಸಂಚಯನ ಕಾರ್ಯದಿಂದ
57. ಉತ್ತರ ಮೈದಾನವು ಕೃಷಿಗೆ ಹೆಚ್ಚು ಉಪಯುಕ್ತವಾಗಿದೆ.ಏಕೆ?

- ➢ ಫಲವತ್ತಾಗಿದೆ ಮತ್ತು ಸರ್ವಕಾಲಿಕ ನದಿಗಳು ಹರಿಯುತ್ತವೆ.

58. ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣ ಹೊಂದಿದೆ. ಏಕೆ?
    - ➢ ಭಾರತದ ಹೆಚ್ಚು ಭಾಗ ಉಷ್ಣವಲಯದಲ್ಲಿದೆ & ವಾಯುಗುಣವು ಹೆಚ್ಚಾಗಿ ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಪಟ್ಟಿದೆ.
59. ಭಾರತವು ಚಳಿಗಾಲದಲ್ಲಿ ಕಡಿಮೆ ಉಷ್ಣಾಂಶವನ್ನು ಹೊಂದಿರಲು ಕಾರಣವೇನು?
    - ➢ ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಪ್ರಕಾಶಿಸುತ್ತವೆ & ಭಾರತದಲ್ಲಿ ಓರೆ ಕಿರಣಗಳಿರುತ್ತವೆ.
60. ಬೇಸಿಗೆ ಕಾಲದಲ್ಲಿ ಭಾರತವು ಹೆಚ್ಚು ಉಷ್ಣಾಂಶವನ್ನು ಹೊಂದಿರುತ್ತದೆ.ಏಕೆ?
    - ➢ ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುತ್ತವೆ.
61. ಮೇಘಾಲಯದ ಮೌಸಿನ್ ರಾಮ್ ಭಾರತದಲ್ಲಿಯೇ ಅತಿ ಹೆಚ್ಚು ಮಳೆ ಪಡೆಯುತ್ತದೆ.ಏಕೆ?
    - ➢ ಬಂಗಾಳಕೊಲ್ಲಿ ಶಾಖೆಯು ಮೇಘಾಲಯ & ಅಸ್ಸಾಂನ ಬೆಟ್ಟಗಳಿಂದ ತಡೆಯಲ್ಪಡುವುದರಿಂದ
62. ಪರಿಸರಣ ಮಳೆಯನ್ನು ಕರ್ನಾಟಕದಲ್ಲಿ ಕಾಫಿಯ ಹೂಮಳೆ ಎಂದು ಕರೆಯುತ್ತಾರೆ. ಏಕೆ?
    - ➢ ಕರ್ನಾಟಕದಲ್ಲಿ ಕಾಫಿ ಬೆಳೆಗೆ ನೆರವಾಗುವುದರಿಂದ.
63. ಪರಿಸರಣ ಮಳೆಯನ್ನು ಕೇರಳದಲ್ಲಿ ಮಾವಿನ ಹೂಯ್ಲು ಎಂದು ಕರೆಯಲು ಕಾರಣವೇನು?
    - ➢ ಕೇರಳದಲ್ಲಿ ಮಾವಿನ ಬೆಳೆಗೆ ನೆರವಾಗುವುದರಿಂದ
64. ಮಳೆಗಾಲದಲ್ಲಿ ಭಾರತದ ಮಧ್ಯ ಭಾಗದಲ್ಲಿ ಕಡಿಮೆ ಒತ್ತಡಪ್ರದೇಶ ನಿರ್ಮಾಣವಾಗುತ್ತದೆ.ಏಕೆ?
    - ➢ ಬೇಸಿಗೆಯ ಅಂತ್ಯದಲ್ಲಿ ಉಷ್ಣಾಂಶವು ಹೆಚ್ಚಾಗುವುದರಿಂದ
65. ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿ ಹೊಂದಿದೆ?
    - ➢ ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ
66. ಕಪ್ಪುಮಣ್ಣನ್ನು ಕಪ್ಪುಹತ್ತಿಮಣ್ಣು ಎಂದು ಏಕೆ ಕರೆಯುತ್ತಾರೆ?
    - ➢ ಹತ್ತಿ ಬೇಸಾಯಕ್ಕೆ ಸೂಕ್ತವಾಗಿರುವುದರಿಂದ.
67. ಕಪ್ಪು ಮಣ್ಣು ಹೇಗೆ ಉತ್ಪತ್ತಿಹೊಂದಿದೆ?
    - ➢ ಬಸಾಲ್ಟ ಶಿಲೆಗಳ ಶಿಥಿಲೀಕರಣದಿಂದ
68. ಕೆಂಪುಮಣ್ಣು ಹೇಗೆ ನಿರ್ಮಾಣಗೊಂಡಿದೆ?
    - ➢ ಗ್ರಾನೈಟ್, ನೀಸ್ & ಇತರೆ ಸ್ಫಟಿಕ ಶಿಲೆಗಳ ಶಿಥಿಲೀಕರಣದಿಂದ
69. ಕಪ್ಪುಮಣ್ಣು ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿರಲು ಕಾರಣವೇನು?
    - ➢ ಜೇಡಿ ಮಿಶ್ರಣ ಹೆಚ್ಚಾಗಿದ್ದು, ಒತ್ತೊತ್ತಾದ ಕಣಗಳಿಂದ ಕೂಡಿದೆ.
70. ಕೆಂಪುಮಣ್ಣಿನಲ್ಲಿ ತೇವಾಂಶ ಸಂಗ್ರಹ ಸಾಮರ್ಥ್ಯ ಕಡಿಮೆ. ಏಕೆ?
    - ➢ ಮರಳಿನಾಂಶ ಹೆಚ್ಚಾಗಿದ್ದು, ಜೇಡಿಯ ಪ್ರಮಾಣ ಕಡಿಮೆಯಿರುವುದು.
71. ಲ್ಯಾಟರೈಟ್(ಜಂಬಿಟ್ಟಿಗೆ) ಮಣ್ಣು ಹೇಗೆ ಉತ್ಪತ್ತಿ ಹೊಂದಿದೆ?
    - ➢ ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆಯಿಂದ
72. ಪರ್ವತಮಣ್ಣು ಹೆಚ್ಚು ಫಲವತ್ತತೆಯನ್ನು ಹೊಂದಿರಲು ಕಾರಣವೇನು?
    - ➢ ಕೊಳೆತ ಜೈವಿಕಾಂಶಗಳನ್ನು ಹೊಂದಿರುವುದರಿಂದ
73. ಮಣ್ಣಿನ ಮೇಲ್ಪದರ ಏಕೆ ಸವೆಸಲ್ಪಡುತ್ತದೆ?
    - ➢ ನದಿ, ಹಿಮನದಿ, ಮಾರುತ & ಸಮುದ್ರದ ಅಲೆಗಳಿಂದ
74. ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು ಸದಾ ಹಸಿರಾಗಿರಲು ಕಾರಣವೇನು?
    - ➢ 250 ಸೆಂ.ಮೀ. ಗಿಂತ ಹೆಚ್ಚು ಮಳೆ

75. ಉಷ್ಣವಲಯದ ಎಲೆ ಉದುರಿಸುವ ಕಾಡುಗಳನ್ನು ಮಾನ್ಸೂನ್ ಕಾಡುಗಳು ಎಂದೂ ಕರೆಯುವರು.ಏಕೆ?

➢ ಇಲ್ಲಿನ ಮರಗಳು ವಸಂತ ಋತು ಮತ್ತು ಬೇಸಿಗೆಯ ಆರಂಭದಲ್ಲಿ ಎಲೆ ಉದುರಿಸುತ್ತವೆ.

76. ಮ್ಯಾಂಗ್ರೋವ್ ಕಾಡುಗಳು ವೈಶಿಷ್ಟ್ಯತೆ ಏನು?

➢ ಬಿಳಿಲುಗಳನ್ನು ಹೊಂದಿರುತ್ತವೆ.

77. ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರ ಕಡಿಮೆಯಾಗುತ್ತಿದೆ.ಏಕೆ?

➢ ನಗರೀಕರಣ, ಕೈಗಾರೀಕರಣ, ರಸ್ತೆ, ಕಾಡ್ಗಿಚ್ಚು ಮೊದಲಾದ ಕಾರಣಗಳಿಂದ

78. ಉತ್ತರ ಭಾರತದ ನದಿಗಳನ್ನು ಹಿಮಾಲಯದ ನದಿಗಳು ಎಂದು ಏಕೆ ಕರೆಯುತ್ತಾರೆ?

➢ ಉತ್ತರ ಭಾರತದ ನದಿಗಳು ಹಿಮಾಲಯದಲ್ಲಿ ಉಗಮ ಹೊಂದುತ್ತವೆ.

79. ದಾಮೋದರ ನದಿಯನ್ನು ಬಂಗಾಳದ ದುಃಖಃಕಾರಿ ನದಿ ಎನ್ನಲು ಕಾರಣವೇನು?

➢ ನದಿಯು ಪ್ರವಾಹದಿಂದ ಉಕ್ಕಿ ಹರಿದಾಗ ಬೆಳೆಗಳು ಮತ್ತು ಜನ ವಸತಿಗೆ ಹಾನಿಯುಂಟುಮಾಡುತ್ತದೆ.

80. ಪರ್ಯಾಯ ಪ್ರಸ್ಥಭೂಮಿ ಮತ್ತು ರಾಜಸ್ತಾನದ ಪಶ್ಚಿಮ ಭಾಗದಲ್ಲಿ ಒಣಬೇಸಾಯವು ಹೆಚ್ಚು ರೂಢಿಯಲ್ಲಿದೆ.ಏಕೆ?

➢ ಅತಿ ಕಡಿಮೆ ಮಳೆ ಮತ್ತು ನೀರಾವರಿಯ ಲಭ್ಯತೆ ಇಲ್ಲದಿರುವುದು.

81. ಭಾರತಕ್ಕೆ ನೀರಾವರಿಯು ಅತ್ಯಗತ್ಯವಾಗಿದೆ.ಏಕೆ?

➢ ಭಾರತದಲ್ಲಿ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನವಾದುದು.

82. ಭಾರತದ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ.ಏಕೆ?

➢ ಮೇಲ್ಮೈ ಲಕ್ಷಣ, ಮಣ್ಣು , ವಾಯುಗುಣ, ನೀರಿನ ಪೂರೈಕೆ, ತಂತ್ರಜ್ಞಾನ ಕಾರಣಗಳಿಂದ.

83. ತಲಾ ಆದಾಯವನ್ನು ಹೇಗೆ ಕಂಡುಹಿಡಿಯಲಾಗುತ್ತದೆ?

➢ ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸುವುದರಿಂದ ಬರುವ ಮೊತ್ತ

84. ಗ್ರಾಮೀಣ ಹಿಂದುಳಿಯುವಿಕೆ ಮತ್ತು ಗ್ರಾಮೀಣ ಬಡತನಕ್ಕೆ ಪ್ರಮುಖ ಕಾರಣವೇನು?

➢ ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆ

85. ಮಹಿಳಾ ಸ್ವಸಹಾಯ ಸಂಘಗಳನ್ನು ಏಕೆ ಅಸ್ಥಿತ್ವಕ್ಕೆ ತರಲಾಗಿದೆ?

➢ ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸುವುದು & ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವುದು

86. ಭಾರತೀಯ ರಿಝರ್ವ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು/ಬ್ಯಾಂಕುಗಳ ತಾಯಿ ಎನ್ನಲು ಕಾರಣವೇನು?

➢ ಭಾರತದ ಬ್ಯಾಂಕುಗಳ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.

87. ಭವಿಷ್ಯದಲ್ಲಿ ಮಗಳ ಮದುವೆಗಾಗಿ ರಂಗಪ್ಪ ಯಾವ ಬ್ಯಾಂಕು ಖಾತೆ ತೆರೆಯುವುದು ಸೂಕ್ತವಾದುದು?

➢ ಆವರ್ತ ಠೇವಣಿ ಖಾತೆ

88. ಒಂದು ನಿಗದಿತ ಅವಧಿಗೆ ಉಳಿತಾಯಕ್ಕಾಗಿ ಯಾವ ಬ್ಯಾಂಕು ಖಾತೆ ಸೂಕ್ತವಾದುದು?

➢ ನಿಶ್ಚಿತ ಠೇವಣಿ ಖಾತೆ

89. ಯಾವ ಖಾತೆಗೆ ಬ್ಯಾಂಕುಗಳು ಬಡ್ಡಿಕೊಡದೆ ಸೇವಾಶುಲ್ಕವನ್ನು ವಿಧಿಸುತ್ತವೆ?

➢ ಚಾಲ್ತಿಖಾತೆ.

89. ವ್ಯಾಪಾರಸ್ಥರು, ವಾಣಿಜ್ಯೋದ್ಯಮಿಗಳಿಗೆ ಚಾಲ್ತಿಖಾತೆ ಹೆಚ್ಚು ಸೂಕ್ತವಾದುದು. ಏಕೆ?

- ಹೆಚ್ಚು ಬ್ಯಾಂಕು ವಹಿವಾಟು ನಡೆಸುವುದರಿಂದ ಹಾಗೂ ಹಣ ತುಂಬಲು & ಹಿಂತೆಗೆಯಲು ಯಾವುದೇ ನಿರ್ಬಂಧವಿಲ್ಲ.

90. ಹೆಚ್ಚು ಬಡ್ಡದರವನ್ನು ಒದಗಿಸುವ ಬ್ಯಾಂಕು ಖಾತೆ ಯಾವುದು?
- ನಿಶ್ಚಿತ ಠೇವಣಿ ಖಾತೆ

91. ಉದ್ಯಮಿಯನ್ನು ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್‌ನ್ನು ಸಂಚರಿಸಲು ಸಹಾಯಕವಾಗುವ ಅಗ್ನಿಬಿರಟೆಗೆ ಹೋಲಿಸಲಾಗಿದೆ. ಏಕೆ?
- ಉದ್ಯಮಿಯು ಆರ್ಥಿಕ ಚಟುವಟಿಕೆಗಳಿಗೆ ಚೈತನ್ಯವನ್ನು ನೀಡುತ್ತಾರೆ.

92. ನಾರಾಯಣಮೂರ್ತಿಯವರ ಇನ್‌ಫೋಸಿಸ್ ಸಂಸ್ಥೆಯ ಸಮಗ್ರ ಯಶಸ್ವಿಗೆ ಕಾರಣವೇನು?
- ಪ್ರಾಮಾಣಿಕತೆ, ಸತ್ಯಸಂದತೆ, ತೆರೆದ ವಹಿವಾಟು & ನೀತಿ ಪೂರ್ಣ ಸಮಗ್ರತೆ

93. ವರ್ಗಿಸ್ ಕುರಿಯನ್‌ರವರನ್ನು ಬಿಳಿಯ ಕ್ರಾಂತಿಯ ಪಿತಾಮಹ ಎಂದು ಏಕೆ ಕರೆಯಲಾಗಿದೆ?
- ಅಮುಲ್ ಹಾಲು ಉತ್ಪಾದನಾ ಸಂಸ್ಥೆ ಹುಟ್ಟುಹಾಕಿ ಭಾರತದಲ್ಲಿಯೇ ಅತಿದೊಡ್ಡ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಿದರು.

94. ಏಕ್ತಾ ಕಪೂರರವರನ್ನು ಭಾರತದ ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸ್ಥಾಪಿಸಿದ ರಾಣಿ ಎನ್ನುವರು.ಏಕೆ?
- ಬಾಲಾಜಿ ದೂರದರ್ಶನ ಚಿತ್ರಸಂಸ್ಥೆಯನ್ನು ಹುಟ್ಟುಹಾಕಿದರು.

95. ಡಾ.ಪ್ರತಾಪರೆಡ್ಡಿಯವರನ್ನು ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದವರೆಂದು ಗುರುತಿಸಲಾಗಿದೆ.ಏಕೆ?
- 750 ಆಧುನಿಕ ಸೌಲಭ್ಯ ಹೊಂದಿದ ಅಪೋಲೋ ವೈದ್ಯಶಾಲೆಗಳನ್ನು ಹುಟ್ಟುಹಾಕಿದರು.

96. ವರ್ನಾಕ್ಯೂಲರ್ ಪ್ರೆಸ್ ಕಾಯ್ದೆಯನ್ನು ಲಾರ್ಡ್ ಲಿಟ್ಟನ್ ಏಕೆ ಜಾರಿಗೊಳಿಸಿದನು?
- ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು

97. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸ್ ಸ್ಥಾಪನೆಯ ಪ್ರಮುಖ ಉದ್ದೇಶವೇನು?
- ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿ ಬೆಳೆಸುವುದು.

98. ದಾದಾಬಾಯಿ ನವರೋಜಿಯವರ ಪ್ರಕಾರ ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿದು ಹೋಗಲು ಕಾರಣವೇನು?
- ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆಗೊಳಿಸಿದ್ದರಿಂದ ಪ್ರತಿಕೂಲ ಸಂದಾಯಬಾಕಿ ಉಂಟಾಗಿದ್ದು

99. ಮಂದಗಾಮಿಗಳನ್ನು ತೀವ್ರಗಾಮಿಗಳು ರಾಜಕೀಯ ಭಿಕ್ಷುಕರು ಎನ್ನಲು ಕಾರಣವೇನು?
- ಬ್ರಿಟಿಷರ ಬಗ್ಗೆ ಮಂದಗಾಮಿಗಳು ಮೃದುಧೋರಣೆಯನ್ನು ಹೊಂದಿದ್ದರಿಂದ

100. ಬ್ರಿಟಿಷರು(ಲಾರ್ಡ್ ಕರ್ಜನ್) ಬಂಗಾಳವನ್ನು ಏಕೆ ವಿಭಜಿಸಿದರು?
- ತೀವ್ರ ಸ್ವರೂಪದ ಬ್ರಿಟಿಷ್ ವಿರೋಧಿ ಭಾವನೆ & ಚಟುವಟಿಕೆಯನ್ನು ಹತ್ತಿಕ್ಕಲು

101. ತಿಲಕರು ಗಣೇಶ, ಶಿವಾಜಿ, ದುರ್ಗ ಉತ್ಸವಗಳನ್ನು ಆರಂಭಿಸಿದ ಉದ್ದೇಶವೇನು?
- ಜನಸಾಮಾನ್ಯರನ್ನು ಬ್ರಿಟಿಷ್ ರ ವಿರುದ್ಧ ಹೋರಾಟಕ್ಕೆ ಸಂಘಟಿಸಲು

102. 1947 ಆಗಸ್ಟ 15 ಭಾರತದ ಪಾಲಿಗೆ ಸಂಭ್ರಮದ ಜೊತೆಗೆ ಸಂಕಟದ ಸಂದರ್ಭವೂ ಆಗಿತ್ತು. ಏಕೆ?
- ಸ್ವಾತಂತ್ರ್ಯವೆಂಬುದು ಅಸಂಖ್ಯಾತ ಹುತಾತ್ಮರ ತ್ಯಾಗ ಮತ್ತು ಬಲಿದಾನಗಳ ಫಲವಾಗಿತ್ತು.

103. ಸರ್ದಾರ್ ವಲ್ಲಭಭಾಯ್ ಪಟೇಲ್ ರನ್ನು ಭಾರತದ ಉಕ್ಕಿ ಮನುಷ್ಯ ಎಂದು ಏಕೆ ಕರೆಯುತ್ತಾರೆ?
- ಭಾರತದ ಒಕ್ಕೂಟಕ್ಕೆ ದೇಶೀಯ ಸಂಸ್ಥಾನಗಳ ವಿಲಿನೀಕರಣದಲ್ಲಿ ಮಹತ್ವದ ಪಾತ್ರ ವಹಿಸಿದರು

104. ಹೈದರಾಬಾದ್ ನ ನಿಜಾಮನು ಭಾರತದ ಒಕ್ಕೂಟಕ್ಕೆ ಸೇರಲು ಏಕೆ ನಿರಾಕರಿಸಿದನು?

- ಸ್ವತಂತ್ರವಾಗಿ ಉಳಿಯುವ ಉದ್ದೇಶ ಹೊಂದಿದ್ದನು.

105. ಜುನಾಘಡ್ ನವಾಬನು ರಾಜ್ಯಬಿಟ್ಟು ಪಲಾಯನಗೊಳ್ಳಲು ಕಾರಣವೇನು?
- ನವಾಬನು ಪಾಕಿಸ್ತಾನಕ್ಕೆ ಸೇರಲು ಇಚ್ಛಿಸಿದ್ದನು ಆದ್ದರಿಂದ ಪ್ರಜೆಗಳು ಆತನ ವಿರುದ್ಧ ದಂಗೆ ಎದ್ದರು.

106. ರಾಜ್ಯ ಪುನರ್ ವಿಂಘಡಣಾ ಆಯೋಗವನ್ನು ಏಕೆ ನೇಮಿಸಲಾಯಿತು?
- ಭಾಷಾವಾರು ಪ್ರಾಂತ ರಚನೆಗಾಗಿ

107. ಮೊದಲನೇ ಮಹಾಯುದ್ಧಕ್ಕೆತಕ್ಷಣದ ಕಾರಣ ತಿಳಿಸಿ.
- ಜುಲೈ 28ರಂದು ಆಸ್ಟ್ರಿಯದ ರಾಜಕುಮಾರ ಆರ್ಕಡ್ಯೂಕ್ ಫ್ರಾನ್ಸಿಸ್ ಫರ್ಡಿನ್ಯಾಂಡ್‌ನ ಹತ್ಯೆ

108. ಝಾರ್ ಶಾಹಿಯನ್ನು ರಾಷ್ಟ್ರೀಯತೆಯ ಜೈಲು ಎಂದು ಏಕೆ ಕರೆಯಲಾಗಿದೆ?
- ಝಾರ್ ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು.

109. ರಾಷ್ಟ್ರಸಂಘ ಏಕೆ ಅಸ್ತಿತ್ವಕ್ಕೆ ಬಂದಿತು?
- ಮುಂದಿನ ದಿನಗಳಲ್ಲಿ ಸಂಭವನೀಯ ಯುದ್ದಗಳನ್ನು ತಡೆಯುವ ಉದ್ಧೇಶದಿಂದ

110. ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆಯು ಕುಸಿಯಲು ಕಾರಣವೇನು?
- ಗೋರ್ಬಚೇವ್ ಜಾರಿಗೊಳಿಸಿದ ಗ್ಲಾಸ್‌ನೋಸ್ಟ್ ಮತ್ತು ಪೆರೆಸ್ಟ್ರೋಯಿಕ ಎಂಬ ಹೆಸರಿನ ಸುಧಾರಣೆಗಳು

111. ಹಿಟ್ಲರ್ ಗೋಬೆಲ್ಸ್ ಎಂಬ ವಿಶೇಷವಾದ ಮಂತ್ರಿಯನ್ನು ಯಾವ ಉದ್ಧೇಶಕ್ಕಾಗಿ ನೇಮಿಸಿದನು?
- ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು

112. ಹಿಟ್ಲರ್ ಬೂದು ಅಂಗಿದಳವನ್ನು ಏಕೆ ರಚಿಸಿದನು?
- ಗಲಭೆಯನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು

113. ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಯನ್ನು ಏನೆಂದು ಕರೆಯಲಾಗಿದೆ?
- ಹೊಲೊಕಾಸ್ಟ್

114. ಎರಡನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?
- 1939 ಸೆಪ್ಟೆಂಬರ್ 1 ರಂದು ಜರ್ಮನಿಯು ಪೋಲೆಂಡ್ ಮೇಲೆ ದಾಳಿ ಮಾಡಿದ್ದು

115. 1930ರ ದಶಕದಲ್ಲಿ ಸಂಭವಿಸಿದ ಮಹಾನ್ ಆರ್ಥಿಕ ಕುಸಿತಕ್ಕೆ ಕಾರಣವೇನು?
- ಮೊದಲನೇ ಮಹಾಯುದ್ಧದಲ್ಲಿ ಹಣ ವ್ಯಯ ಮಾಡಿದ್ದು.

116. ಎರಡನೇ ಮಹಾಯುದ್ಧಕ್ಕೆ ಅಮೇರಿಕಾ ಪ್ರವೇಶಿಸಲು ಕಾರಣವೇನು?
- ಜಪಾನ್ ಅಮೇರಿಕಾದ ನೌಕಾನೆಲೆ ಪರ್ಲ್‌ಹಾರ್ಬರ್ ಮೇಲೆ ದಾಳಿಮಾಡಿತು

117. ವಿಶ್ವ ಸಂಸ್ಥೆಯ ಖಾಯಂ ಸದಸ್ಯತ್ವ ರಾಷ್ಟ್ರಗಳಾವುವು?
- ಅಮೇರಿಕಾ, ರಷ್ಯಾ, ಚೀನಾ, ಫ್ರಾನ್ಸ್ & ಇಂಗ್ಲೆಂಡ್

118. ಸಾಮಾನ್ಯ ಸಭೆಯನ್ನು ಜಾಗತಿಕ ಸಂಸತ್ತು ಎಂದು ಏಕೆ ಕರೆಯುತ್ತಾರೆ?
- ವಿಶ್ವದ ಎಲ್ಲಾ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಇದು ಪ್ರಮುಖ ಪಾತ್ರವಹಿಸುತ್ತದೆ.

119. ಯುನಿಸೆಫ್ ಸಂಸ್ಥೆಯ ಮೂಲ ಉದ್ಧೇಶವೇನು?
- ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದು.

120. ನಾವು ಯುನಿಸೆಫ್‌ನ ಶುಭಾಶಯಪತ್ರಗಳನ್ನೆ ಕೊಳ್ಳಬೇಕು.ಏಕೆ?
- ಶುಭಾಶಯ ಪತ್ರಗಳ ಮಾರಾಟದಿಂದ ಬಂದ ಹಣವನ್ನು ಮಕ್ಕಳ ಯೋಗಕ್ಷೇಮಕ್ಕೆ ಬಳಸಲಾಗುತ್ತದೆ.

121. ಯಾವ ಸೂತ್ರವು ಸಾರ್ಕನ ಪ್ರಗತಿಗೆ ತೊಡಕಾಗಿದೆ?
- ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೆ ಇರಬೇಕು ಎಂಬ ಸೂತ್ರ.

122. ಚಿಪ್ಕೋ ಚಳುವಳಿಯ ಮೂಲ ಉದ್ಧೇಶವೇನು?

- ಅರಣ್ಯನಾಶ & ಪರಿಸರನಾಶ ತಡೆಯುವುದು

123. ಕರ್ನಾಟಕದಲ್ಲಿ ಅಪ್ಪಿಕೋ ಚಳುವಳಿಯ ಮೂಲ ಉದ್ದೇಶವೇನು?

- ಕಳ್ಳ ಸಾಗಾಣಿಕೆ ತಡೆಯುವುದು, ಮರ ಬೆಳೆಸುವುದು, ಪರಿಸರದ ಮಹತ್ವವನ್ನು ಜನರಿಗೆ ಸಾರುವುದು.

124. ನರ್ಮದಾ ಬಚಾವೋ ಆಂದೋಲನವನ್ನು ಏಕೆ ಹಮ್ಮಿಕೊಳ್ಳಲಾಯಿತು?

- ಅರಣ್ಯ ನಾಶ, ಪರಿಸರ ನಾಶ ಮತ್ತು ಜೀವ ಸಂಕುಲಕ್ಕೆ ತೊಂದರೆ ಉಂಟಾಗುತ್ತದೆ ಆದ್ದರಿಂದ

125. ಮೌನ ಕಣಿವೆ ಆಂದೋಲನವನ್ನು ಏಕೆ ನಡೆಸಲಾಯಿತು?

- ಪರಿಸರ ನಾಶದ ಜೊತೆಗೆ ಜೀವ ಪ್ರಭೇದ ನಾಶದ ವಿರುದ್ಧ ಹೋರಾಟ

126. ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿಯನ್ನು ಏಕೆ ಹಮ್ಮಿಕೊಳ್ಳಲಾಯಿತು?

- ಅರಣ್ಯ ನಾಶ ಮತ್ತು ಅಣು ವಿಕಿರಣದಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ ಎಂದು

127. ಕರ್ನಾಟಕ ಕರಾವಳಿ ತೀರದ ಪರಿಸರ ಚಳುವಳಿಗೆ ಕಾರಣವೇನು?

- ತೈಲ ಕಾರ್ಯಾಗಾರದಿಂದ ಹೊರಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶ

128. ಮಹಿಳಾ ಚಳುವಳಿಗೆ ಪ್ರಮುಖ ಕಾರಣವೇನು?

- ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯದ ವಿರುದ್ಧ

129. ಕಾರ್ಮಿಕ ಚಳುವಳಿಗೆ ಮೂಲ ಕಾರಣವೇನು?

- ಉತ್ತಮ ದುಡಿಯುವ ವಾತಾವರಣ, ಗೌರವಯುತ ನಡವಳಿಕೆ, ಕಾರ್ಮಿಕ ಕಾನೂನುಗಳ ಅನುಷ್ಠಾನ

130. ರೈತ ಚಳುವಳಿಗೆ ಮೂಲ ಕಾರಣವೇನು?

- ಅವೈಜ್ಞಾನಿಕ ಬೆಲೆ ನಿಗದಿ, ಜಪ್ತಿ, ಲೆವಿ ಪದ್ಧತಿ ವಿರುದ್ಧ

131. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ ಜಾರಿಯ ಉದ್ದೇಶವೇನು?

- ಇತ್ತೀಚಿನ ದಿನಗಳಲ್ಲಿ ಮಕ್ಕಳ ಮೇಲೆ ಶಾಲೆಗಳಲ್ಲಿ, ಕುಟುಂಬಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯ ತಡೆಯಲು

132. ಪೋಷಕಾಂಶಗಳ ಅಭಾವವನ್ನು ಏನೆಂದು ಕರೆಯುತ್ತಾರೆ?

- ಕಾಣದ ಹಸಿವು

133. ಬಾಲ್ಯವಿವಾಹವನ್ನು ಏಕೆ ಮಾಡಬಾರದು?

- ಹೆಣ್ಣು ಮಕ್ಕಳಲ್ಲಿ ಗರ್ಭಕೋಶ ಸಮರ್ಥವಾಗಿ ಬೆಳೆಯಲು ಕನಿಷ್ಟ 18 ವರ್ಷ ಅಗತ್ಯ. ಇಲ್ಲದಿದ್ದರೆ ಹೆರಿಗೆ ಸಂದರ್ಭದಲ್ಲಿ ತಾಯಿ ಸಾವಿಗೆ ತುತ್ತಾಗಬೇಕಾಗುತ್ತದೆ.

135. ಮ್ಯಾಂಗನೀಸ್ ಅದಿರು ಒಂದು ಬಹುಪಯೋಗಿ ಖನಿಜ ಎನಿಸಿದೆ.ಏಕೆ?

- ಇದನ್ನು ಉಕ್ಕು , ಬ್ಯಾಟರಿ, ಗಾಜು, ಪಿಂಗಾಣಿ ವಸ್ತು, ಕ್ಯಲಿಕೋ ಪ್ರಿಂಟಿಂಗಾಗಿ ಬಳಕೆ.

136. ಇತ್ತೀಚೆಗೆ ಭಾರತದ ಅಭ್ರಕದ ರಫ್ತು ಪ್ರಮಾಣವು ಕಡಿಮೆಯಾಗಲು ಕಾರಣವೇನು?

- ಇಂದು ಹಲವು ರಾಷ್ಟ್ರಗಳು ಕೃತಕ ಅಭ್ರಕವನ್ನು ಉತ್ಪಾದಿಸಿಕೊಳ್ಳುತ್ತಿರುವುದರಿಂದ.

137. ಇಂದು ಭಾರತಕ್ಕೆ ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆ & ಅಭಿವೃದ್ಧಿ ಅನಿವಾರ್ಯವಾಗಿದೆ.ಏಕೆ?

- ಭಾರತವು ತನ್ನ ವಿದ್ಯುತ್ ಅಭಾವದ ಸಮಸ್ಯೆ ನಿವಾರಿಸಲು

138. ಕಲ್ಲಿದ್ದಲು ಹೇಗೆ ಉತ್ಪತ್ತಿ ಹೊಂದಿದೆ?

- ಸಾವಿರಾರು ವರ್ಷಗಳ ಹಿಂದೆ ಭೂಗರ್ಭದಲ್ಲಿ ಹುದುಗಿ ಹೋಗಿದ್ದ ಸಸ್ಯಾವಶೇಷವು ಅಧಿಕ ಉಷ್ಣಾಂಶ & ಒತ್ತಡಗಳಿಂದ ಕಲ್ಲಿದ್ದಲಾಗಿ ರೂಪಗೊಂಡಿದೆ.

139. ಕಲ್ಲಿದ್ದಲನ್ನು ಕಪ್ಪು ಬಂಗಾರವೆಂದು ಕರೆಯಲು ಕಾರಣವೇನು?

- ಬಣ್ಣ, ಪ್ಲಾಸ್ಟಿಕ್, ಕೃತಕನಾರು, ಕೃತಕ ರಬ್ಬರ್ ಹೀಗೆ ವಿವಿಧ ಉಪಯೋಗವನ್ನು ಹೊಂದಿರುವುದರಿಂದ.

140. ಪೆಟ್ರೋಲಿಯಂನ್ನು ದ್ರವರೂಪದ ಚಿನ್ನ ಎಂದು ಏಕೆ ಕರೆಯುತ್ತಾರೆ?

- ➢ ಬಣ್ಣ, ಕೃತಕ ರಬ್ಬರ್, ಔಷಧಿ ಹೀಗೆ ವಿವಿಧ ಉದ್ದೇಶಗಳಿಗಾಗಿ ಬಳಕೆ & ಆರ್ಥಿಕ ಮೌಲ್ಯವನ್ನಾಧರಿಸಿ

141. ಪ್ರಧಾನ ಮಂತ್ರಿಗಳ ಗ್ರಾಮಸಡಕ್ ಯೋಜನೆಯನ್ನು ಏಕೆ ಹಮ್ಮಿಕೊಳ್ಳಲಾಗಿದೆ?

- ➢ ಗ್ರಾಮೀಣ ರಸ್ತೆಗಳ ನಿರ್ಮಾಣ ಮತ್ತು ಸುಧಾರಣೆಗಾಗಿ

142. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಏಕೆ ಸ್ಥಾಪಿಸಲಾಗಿದೆ?

- ➢ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ

143. ರೈಲು ಸಾರಿಗೆಯು ಹೆಚ್ಚು ಉಪಯುಕ್ತವಾದುದು ಎಂದು ಹೇಗೆ ಹೇಳುವಿರಿ?

- ➢ ಭಾರವಾದ ಸರಕು ಮತ್ತು ಅಧಿಕ ಸಂಖ್ಯೆಯ ಪ್ರಯಾಣಿಕರನ್ನು ದೂರದ ಸ್ಥಳಗಳಿಗೆ ಸಾಗಿಸಲು ಸಹಾಯಕವಾಗಿದೆ.

144. ಬ್ರಿಟಿಷರು ಭಾರತದಲ್ಲಿ ರೈಲು ಮಾರ್ಗವನ್ನು ನಿರ್ಮಿಸಿದ ಉದ್ದೇಶವೇನು?

- ➢ ಕ್ಷಾಮ ಪೀಡಿತ ಭಾಗಗಳಿಗೆ ಆಹಾರ, ಮೇವು, ಹಾಗೂ ಸೈನ್ಯ ಸಾಗಿಸಲು

145. ಕೊಳವೆ ಮಾರ್ಗಗಳನ್ನು ವಿಷೇಶವಾಗಿ ಯಾವ ಉದ್ದೇಶಕ್ಕಾಗಿ ಬಳಸುತ್ತಾರೆ?

- ➢ ಕಚ್ಚಾ ತೈಲ, ನೈಸರ್ಗಿಕ ಅನಿಲ, ಹಾಗೂ ಕೆಸರು ರೂಪದ ಖನಿಜ ಸಾಗಾಣಿಕೆಗಾಗಿ

146. ಭಾರತದ ವಿದೇಶಿ ವ್ಯಾಪಾರದಲ್ಲಿ ಸಾಗರ ಜಲಸಾರಿಗೆಯ ಪಾತ್ರ ಪ್ರಮುಖವಾದುದು.ಏಕೆ?

- ➢ ಭಾರತದ ವಿದೇಶಿ ವ್ಯಾಪಾರದಲ್ಲಿ ಶೇ.85% ಭಾಗವು ಸಾಗರ ಜಲಸಾರಿಗೆಯ ಮೂಲಕ ನಡೆಯುತ್ತದೆ.

147. ಮುಂಬಯಿ ಬಂದರನ್ನು ಭಾರತದ ಹೆಬ್ಬಾಗಿಲು ಎನ್ನಲು ಕಾರಣವೇನು?

- ➢ ಇದು ಭಾರತದ ದೊಡ್ಡ ಪ್ರಮಾಣದ, ವಿಶಾಲ ಸ್ಥಳಾವಕಾಶವುಳ್ಳ, ಹಾಗೂ ಹಡಗು ತಂಗುವ ಉತ್ತಮ ಸ್ಥಳವುಳ್ಳ ಬಂದರಾಗಿದೆ.

148. ಜವಾಹರಲಾಲ್ ನೆಹರು(ನವ್ಹಾಶೇವ) ಬಂದರನ್ನು ನಿರ್ಮಿಸಿದ ಉದ್ದೇಶವೇನು?

- ➢ ಮುಂಬಯಿ ಬಂದರಿನ ಒತ್ತಡವನ್ನು ಕುಗ್ಗಿಸಲು/ ತಗ್ಗಿಸಲು.

149. ಎನ್ನೋರ್ ಬಂದರನ್ನು ಏಕೆ ನಿರ್ಮಿಸಲಾಗಿದೆ?

- ➢ ಚೆನ್ನೈ ಬಂದರಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದಾಗಿ.

150. ಕೋಲ್ಕತ್ತ ಬಂದರಿನಲ್ಲಿ ಹೂಳು ತೆಗೆಯುವ ಕಾರ್ಯ ಅವಶ್ಯವಾಗಿದೆ.ಏಕೆ?

- ➢ ಹೂಗ್ಲಿ ನದಿಯಿಂದ ಆಗಾಗ್ಗೆ ಹೂಳು ತುಂಬಿಕೊಳ್ಳುವುದರಿಂದ ಹಡಗು ಸಂಚಾರಕ್ಕೆ ತೊಂದರೆಯಾಗುತ್ತದೆ.

151. ವಾಯು ಸಾರಿಗೆಯು ತುರ್ತುಪರಿಸ್ಥಿತಿಗೆ ಬಹು ಉಪಯುಕ್ತವಾಗಿದೆ. ಹೇಗೆ?

- ➢ ಇದು ಅತ್ಯಂತ ವೇಗಯುತ ಸಾರಿಗೆಯಾಗಿದ್ದು ಸಮರ, ಪ್ರವಾಹ, ಭೂಕಂಪಗಳಂತಹ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ.

152. ಅಲ್ಯೂಮಿನಿಯಂನ್ನು 20ನೇ ಶತಮಾನದ ಅದ್ಭುತ ಲೋಹ ಎಂದು ಏಕೆ ಕರೆಯುತ್ತಾರೆ?

- ➢ ವಿಮಾನ, ಹಡಗು, ಬಣ್ಣ ತಯಾರಿಕೆ, ರೈಲು ಸಾರಿಗೆ ಹೀಗೆ ಬಹು ಉಪಯೋಗವನ್ನು ಹೊಂದಿರುವುದರಿಂದ.

153. ಭಾರತೀಯರಿಗೆ ಪ್ರಾಚೀನ ಕಾಲದಿಂದಲೂ ಕಬ್ಬಿಣದ ಅದಿರು ಕರಗಿಸುವ & ಕಬ್ಬಿಣ ತಯಾರಿಸುವ ತಳಿದಿತ್ತು ಎಂದು ಹೇಗೆ ಹೇಳುವಿರಿ?

- ➢ ದೆಹಲಿ ಬಳಿ ಮೆಹ್ರೌಲಿಯಲ್ಲಿ ನಿರ್ಮಿಸಿರುವ ಕಬ್ಬಿಣದ ಸ್ತಂಭ ಉತ್ತಮ ಉದಾಹರಣೆ

154. ಮುಂಬಯಿಯನ್ನು ಭಾರತದ ಕಟನೋಪೋಲಿಸ್ ಮತ್ತು ಭಾರತದ ಮ್ಯಾಂಚೆಸ್ಟರ್ ಎನ್ನಲು ಕಾರಣವೇನು?

- ➢ ಮುಂಬಯಿ ನಗರವು ಭಾರತದ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿರುವುದರಿಂದ.

155. ಇಂದು ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಯು ತೀವ್ರಗತಿಯಲ್ಲಿ

ಅಭಿವೃದ್ಧಿಗುಳ್ಳುತ್ತಿರುವ ಉದ್ಯಮವಾಗಿದೆ. ಕಾರಣವೇನು?

- ಭಾರತವು ಸಾಕಷ್ಟು ಯುವ ಜನಸಂಖ್ಯೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ಮಾಹಿತಿ ತಂತ್ರಜ್ಞಾನವನ್ನು ಹೊಂದಿದೆ

156. ಸಾಫ್ಟವೇರ್ ತಂತ್ರಜ್ಞಾನ ಪಾರ್ಕಗಳನ್ನು ಏಕೆ ಸ್ಥಾಪಿಸಲಾಗಿದೆ?

- ಸಾಫ್ಟ್ ವೇರ್ ಉದ್ಯಮದ ಉತ್ತೇಜನಕ್ಕಾಗಿ

157. ಬೆಂಗಳೂರನ್ನು ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯಲು ಕಾರಣವೇನು?

- ಭಾರತದಲ್ಲಿ ಬೆಂಗಳೂರು ಸಾಫ್ಟ್‌ವೇರ್ ಕೈಗಾರಿಕೆಯಲ್ಲಿ ಅತ್ಯಂತ ಮಹತ್ವದ್ದು.

158. ಕಡಲ ತೀರದುದ್ದಕ್ಕೂ ಮ್ಯಾಂಗ್ರೋವ್ ಮರಗಳನ್ನು ಏಕೆ ಬೆಳೆಸಲಾಗಿತ್ತದೆ?

- ಆವರ್ತ ಮಾರುತಗಳ ಹೊಡೆತ ಮತ್ತು ಕಡಲಕೊರೆತಗಳನ್ನು ನಿಯಂತ್ರಿಸಲು

159. ಸಮುದ್ರ ತೀರದ ಸವೆತ/ ಕಡಲಕೊರೆತಕ್ಕೆ ಪ್ರಮುಖ ಕಾರಣವೇನು?

- ಸಮುದ್ರದ ಅಲೆಗಳು ಮತ್ತು ಸಮುದ್ರ ಪ್ರವಾಹಗಳು

160. ಭಾರತದ ಪರ್ಯಾಯ ದ್ವೀಪವು ಅಚಲವಾದ ಭೂಭಾಗವೆಂದು ಪರಿಗಣಿಸಲ್ಪಟ್ಟದೆ.ಏಕೆ?

- ಈ ವಲಯದಲ್ಲಿ ಭೂಕಂಪಗಳು ಸಂಭವಿಸುವುದು ಕಡಿಮೆ

161. ಇತ್ತೀಚೆಗೆ ಕನಿಷ್ಠ ಭೂಕಂಪ ತೀವ್ರತೆಯ ವಲಯವೆಂದು ಪರಿಗಣಿಸಲ್ಪಟ್ಟ ಭಾರತದ ಭೂಭಾಗ ಯಾವುದು?

- ಭಾರತದ ಪರ್ಯಾಯ ದ್ವೀಪ.

162. 1901 ರಿಂದ 1921ರವರೆಗೆ ಭಾರತದ ಜನಸಂಖ್ಯಾಬೆಳವಣಿಗೆಯು ನಿಧಾನಗತಿಯಲ್ಲಿತ್ತು. ಏಕೆ?

- ಅಧಿಕ ಮರಣದರ

163. 1901 ರಿಂದ 1921ರವರೆಗೆ ಭಾರತದಲ್ಲಿ ಅಧಿಕ ಮರಣದರಕ್ಕೆ ಕಾರಣವೇನು?

- ಮಾರಣಾಂತಿಕ ಕಾಯಿಲೆ & ವೈದ್ಯಕೀಯ ಸೌಲಭ್ಯಗಳ ಕೊರತೆ.

164. ಭಾರತದ ಕೆಲವು ಪ್ರದೇಶಗಳಲ್ಲಿ ಅಧಿಕ ಜನಸಾಂದ್ರತೆ ಕಂಡುಬರಲು ಕಾರಣವೇನು?

- ಫಲವತ್ತಾದ ಮಣ್ಣು, ನೀರಾವರಿ, ಸಾರಿಗೆ ಸಂಪರ್ಕ ಅಭಿವೃದ್ಧಿ.

165. ಭಾರತದ ಕೆಲವು ಪ್ರದೇಶಗಳಲ್ಲಿ ಕಡಿಮೆ ಜನಸಾಂದ್ರತೆ ಕಂಡುಬರಲು ಕಾರಣವೇನು?

- ಪರ್ವತ, ಬೆಟ್ಟಗುಡ್ಡಗಳ ಭಾಗ, ಅರಣ್ಯಪ್ರದೇಶ, ಅರೆಮರುಭೂಮಿ

166. ಜನಸಂಖ್ಯಾ ಹಂಚಿಕೆಯ ಮೇಲೆ ವಾಯುಗುಣ ಹೇಗೆ ಪ್ರಭಾವ ಬೀರುತ್ತದೆ?

- ಉತ್ತಮ ವಾಯುಗುನವಿದ್ದರೆ ಅಧಿಕ ಜನಸಂಖ್ಯೆಯಿದ್ದರೆ, ಅತಿಶೀತ& ಒಣಹವೆಯಿದ್ದರೆ ಕಡಿಮೆ ಜನಸಂಖ್ಯೆ ಕಂಡುಬರುತ್ತದೆ.

167. ಬ್ಯಾಂಕುಹಣ ಹೇಗೆ ಅಸ್ಥಿತ್ವಕ್ಕೆ ಬಂದಿತು?

- ವ್ಯಾಪಾರ ಮತ್ತು ವಾಣಿಜ್ಯದ ಅಭಿವೃದ್ಧಿ ಹೊಂದಿದ್ದರಿಂದ.

168. ಪ್ಲಾಸ್ಟಿಕ್ ಹಣವನ್ನು ಇ–ಹಣವೆಂದೂ ಕರೆಯುತ್ತಾರೆ. ಏಕೆ?

- ವಿದ್ಯುನ್ಮಾನ ಸಾಧನಗಳ ಮೂಲಕ ವ್ಯವಹಾರ ನಡೆಸುವುದರಿಂದ.

169. ಭಾರತೀಯ ರಿಝರ್ವ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಎಂದು ಕರೆಯಲು ಕಾರಣವೇನು?

- ದೇಶದಲ್ಲಿರುವ ಎಲ್ಲ ಬ್ಯಾಂಕುಗಳನ್ನು ನಿಯಂತ್ರಿಸುತ್ತದೆ.

170. ಹಣದುಬ್ಬರವು ಏಕೆ ಸಂಭವಿಸುತ್ತದೆ?

- ಅಧಿಕ ಹಣದ ಪೂರೈಕೆ ಮತ್ತು ಕಡಿಮೆ ಸರಕು ಸೇವೆಗಳ ಪೂರೈಕೆ.

171. ಬ್ಯಾಂಕುದರವು ಬ್ಯಾಂಕುಗಳ ಸಾಲದ ಪ್ರಮಾಣವನ್ನು ಹೇಗೆ ನಿಯಂತ್ರಿಸುತ್ತದೆ?

- ಬ್ಯಾಂಕುದರ ಹೆಚ್ಚಾದಾಗ ಸಾಲದ ದರಹೆಚ್ಚಾಗಿ ಸಾಲನೀಡಿಕೆ ಕುಗ್ಗುತ್ತದೆ. & ಬ್ಯಾಂಕುದರ ಕಡಿಮೆಯಾದಾಗ ಸಾಲದ ದರ ಕಡಿಮೆಯಾಗಿ ಸಾಲನೀಡಿಕೆ ಹಿಗ್ಗುತ್ತದೆ.

172. ಕೋಶೀಯ/ವಿತ್ತೀಯ ನೀತಿಯ ಪ್ರಮುಖ ಉದ್ಧೇಶವೇನು?

- ಆರ್ಥಿಕ ಬೆಳವಣಿಗೆ & ಸ್ಥಿರತೆ ಸಾಧಿಸಿ ವರಮಾನ ಹಂಚಿಕೆಯನ್ನು ಸಾಧಿಸುವುದು.

173. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕೊರತೆ ಆಯವ್ಯಯವನ್ನು ಮಂಡಿಸಲು ಕಾರಣವೇನು?

- ಅಧಿಕ ಪ್ರಮಾಣದ ವೆಚ್ಚಮಾಡಿ, ಆರ್ಥಿಕ ಅಭಿವೃದ್ಧಿ ಸಾಧಿಸಲು.

174. 20ನೇ ಶತಮಾನದಲ್ಲಿ ಆಧುನಿಕ ಸರ್ಕಾರಗಳ ವೆಚ್ಚ ಹೆಚ್ಚುತ್ತಿರಲು ಕಾರಣವೇನು?

- ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಸರ್ಕಾರಗಳ ಕಾರ್ಯಕ್ಷೇತ್ರ & ಪಾತ್ರ ವಿಸ್ತರಣೆಯಾಗಿರುವುದರಿಂದ.

175. ಪ್ರತ್ಯಕ್ಷ ತೆರಿಗೆಯು ಪರೋಕ್ಷ ತೆರಿಗೆಗಿಂತ ಹೇಗೆ ಭಿನ್ನವಾಗಿದೆ?

- ಪ್ರತ್ಯಕ್ಷತೆರಿಗೆಯನ್ನು ವರ್ಗಾಯಿಸಲಾಗದು ಆದರೆ ಪರೋಕ್ಷ ತೆರಿಗೆಯನ್ನು ಬೇರೆಯವರಿಗೆ ವರ್ಗಾಯಿಸಬಹುದಾಗಿದೆ.

176. ಇತ್ತೀಚೆಗೆ ಕೇಂದ್ರ ಸರ್ಕಾರವು ಜಾರಿಗೊಳಿಸಲಾದ ಪರೋಕ್ಷ ತೆರಿಗೆ ಯಾವುದು?

- ಸರಕು–ಸೇವಾ ತೆರಿಗೆ(ಜುಲೈ 1, 2017).

177. ಅಧಿಕ ಪ್ರಮಾಣದ ಕೊರತೆಗಳು ಆರ್ಥಿಕ ವ್ಯವಸ್ಥೆಗೆ ಉತ್ತಮವಲ್ಲ.ಏಕೆ?

- ರಾಷ್ಟ್ರಕ್ಕೆ ಹೊರೆ ಸೃಷ್ಟಿಸುತ್ತವೆಯಲ್ಲದೇ ಹಣಕಾಸಿನ ಅಶಿಸ್ತನ್ನು ತೋರಿಸುತ್ತದೆ.

178. ಭಾರತ ಸರ್ಕಾರವು ಕೋಶೀಯ ಹೊಣೆಗಾರಿಕೆ & ಮುಂಗಡಪತ್ರ ನಿರ್ವಹಣೆ ಕಾಯ್ದೆ(FRBMA)ಯನ್ನು ಏಕೆಜಾರಿಗೊಳಿಸಿದೆ?

- ಹಣಕಾಸಿನ ಅಶಿಸ್ತು & ಹಣದುಬ್ಬರ ನಿಯಂತ್ರಣ

179. ಸಮುದ್ರಯಾನದಲ್ಲಿ ಸಾರಿಗೆ ವೆಚ್ಚವನ್ನು ಹೇಗೆ ಕಡಿಮೆಮಾಡಬಹುದು?

- ಕಂಟೈನರ್ ಸೇವೆಯ ಅಳವಡಿಕೆಯಿಂದ

180. ಜಾಗತೀಕರಣದಿಂದಾಗಿ ವಿಶ್ವ ವ್ಯಾಪಾರ ಸಂಸ್ಥೆ ಪ್ರಾರಂಭವಾಯಿತು. ಹೇಗೆ?

- ಜಾಗತೀಕರಣವು ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳನ್ನು ಸೃಷ್ಟಿಸಿತು.

181. ಜಾಗತೀಕರಣದಿಂದ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡುಬರುತ್ತದೆ. ಹೇಗೆ?

- ಬೇರೆಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರೆಯುವುದರಿಂದ.

182. ಜಾಗತೀಕರಣವು ವಿವಿಧ ದೇಶಗಳ ನಡುವೆ ಸಾಮಾಜಿಕ & ರಾಜಕೀಯ ಸಾಮರಸ್ಯವನ್ನು ಉಂಟುಮಾಡುತ್ತದೆ. ಹೇಗೆ?

- ಪ್ರಪಂಚದ ದೇಶಗಳ ನಡುವೆ ಆರ್ಥಿಕ ಅವಲಂಬನೆಗೆ ಅವಕಾಶ ಒದಗಿಸುವ ಮೂಲಕ

183. ಜಾಗತೀಕರಣವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗುಲಾಮಿತನ ಹಾಗೂ ಬಾಲಕಾರ್ಮಿಕತನಕ್ಕೆ  ಕಾರಣವಾಗುತ್ತದೆ. ಕಾರಣವೇನು?

- ವೆಚ್ಚ ಕಡಿಮೆಮಾಡುವ ದಿಸೆಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಉತ್ಪಾದನೆಗಳನ್ನು ಹೊರಮೂಲಗಳಿಂದ ರೂಢಿಗೆ ತಂದು ನೌಕರಶಾಹಿ ಕೆಲಸಗಳನ್ನು ಉತ್ತೇಜಿಸುವುದರಿಂದ.

184. ಜಾಗತೀಕರಣದಿಂದ ವಿಶ್ವಮಾರುಕಟ್ಟೆಯಲ್ಲಿ ತೀವ್ರವಾದ ಪೈಪೋಟಿಯಿಂದ ಉಂಟಾಗುವ ದುಷ್ಪರಿಣಾಮವೇನು?

- ನೀತಿಬಾಹಿರ ಪದ್ಧತಿಗಳು ವ್ಯವಹಾರ ವಹಿವಾಟುಗಳಲ್ಲಿ ರೂಡಿಗೆ ಬರುತ್ತವೆ.

185. ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಡುತ್ತವೆ.ಏಕೆ?

- ಕೈಗಾರಿಕಾ ತ್ಯಾಜ್ಯಗಳು ಶೇಕರಣೆಹೊಂದಿ ಮಾಲಿನ್ಯವು ಆಕಾಶದೆತ್ತರಕ್ಕೆ ಬೆಳೆಯುತ್ತದೆ.

186. ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲನೆ ಹೋದುತ್ತಿವೆ. ಕಾರಣವೇನು?

- ಜಾಗತೀಕರಣದಿಂದಾಗಿ ಶೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡುತ್ತಿದ್ದು ಪ್ರಯೋಜನಕಾರಿಯಲ್ಲದ ಆಹಾರ ಸೇವನೆ ಜಾಸ್ತಿಯಾಗುತ್ತಿದೆ.

187. ಜಾಗತೀಕರಣವು ಪರಿಸರದ ಅವನತಿಗೆ ಹೇಗೆ ಕಾರಣವಾಗಿದೆ?

- ಕೈಗಾರಿಕೆಗಳಿಂದ ಮಾಲಿನ್ಯ ಹೆಚ್ಚಾಗಿ ವಾಯು ಮಲೀನವಾಗುತ್ತಿದೆ. ಪಟ್ಟಣಗಳು ಕಸದ ತೊಟ್ಟಿಗಳಾಗಿತ್ತಿವೆ.

188. ಜಾಗತೀಕರಣದಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಿರುದ್ಯೋಗ ಹೆಚ್ಚುತ್ತಿದೆ.ಏಕೆ?

- ಅಗ್ಗ ವಸ್ತುಗಳ ಆಮದಿನಿಂದ ಉತ್ಪಾದನೆಯು ಕಡಿಮೆಯಾಗುತ್ತಿರುವುದರಿಂದ

189. ವಿಶ್ವ ವ್ಯಾಪಾರ ಸಂಘಟನೆ ಏಕೆ ಅಸ್ತಿತ್ವಕ್ಕೆ ಬಂದಿದೆ?

- ವಿಶ್ವ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲ ವಿಚಾರಗಳ ಮೇಲ್ವಿಚಾರಣೆಗಾಗಿ

190. ಜಾಗತೀಕರಣದಿಂದಾಗಿ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದಾಗಯತ್ತದೆ.ಹೇಗೆ?

- ಹೆಚ್ಚುತ್ತಿರುವ ಪೈಪೋಟಿಯಿಂದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗದು & ವಿದೇಶಿ ವಸ್ತುಗಳ ಬೆಲೆ ಕಡಿಮೆಯಾಗುವುದರಿಂದ.

191. ಪೂರೈಕೆದಾರ ಹಾಗೂ ವ್ಯಾಪಾರಿಗಳ ಕರ್ತವ್ಯವೇನು?

- ಗ್ರಾಹಕರು ನೀಡುವ ಹಣಕ್ಕೆ ಪ್ರತಿಫಲವಾಗಿ ಯೋಗ್ಯಮಟ್ಟದ ವಸ್ತು ಮತ್ತು ಸೇವೆಗಳನ್ನು ಒದಗಿಸುವುದು.

192. ಮಹಿಳೆಯರು ಮುಂಬೈನಲ್ಲಿ ಅವೇರ್ ಎಂಬ ಸಂಸ್ಥೆಯನ್ನು ಏಕೆ ಪ್ರಾರಂಭಿಸಿದರು?

- ವ್ಯಾಪಾರಿಗಳು & ಪೂರೈಕೆದಾರ ಶೋಷಣೆಯ ವಿರುದ್ಧ ಗ್ರಾಹಕರನ್ನು ರಕ್ಷಿಸಲು

193. ಇತ್ತೀಚೆಗೆ ಗ್ರಾಹಕ ಮತ್ತು ಪೂರೈಕೆದಾರರ ನಡುವೆ ಅಂತರ ಹೆಚ್ಚಾಗಿ ಇವರಿಬ್ಬರ ನಡುವೆ ನೇರ ವ್ಯವಹಾರ ಇಲ್ಲದಂತಾಗಿದೆ.ಏಕೆ?

- ಮಧ್ಯವರ್ತಿಗಳೆ ಬೆಲೆಯನ್ನು ನಿರ್ಧರಿಸತೊಡಗಿರುವುದು.

194. ಇತ್ತೀಚೆಗೆ ಟೆಲಿಶಾಪಿಂಗ್ ಹೆಚ್ಚುತ್ತಿರಲು ಕಾರಣವೇನು?

- ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ.

195. ಉತ್ಪಾದಕರ ಕರ್ತವ್ಯವೇನು?

- ಗ್ರಾಹಕರ ಅವಶ್ಯಕತೆಗಳನ್ನು ಪೂರೈಸುವುದು.

196. ಗ್ರಾಹಕರನ್ನು ಮಾರುಕಟ್ಟೆಯ ರಾಜ ಎಂದು ಏಕೆ ಕರೆಯುತ್ತಾರೆ?

- ಮಾರುಕಟ್ಟೆಯಲ್ಲಿ ಗ್ರಾಹಕನು ಅತ್ಯಂತ ಪ್ರಮುಖ ಸ್ಥಾನವನ್ನು ಅಲಂಕರಿಸಿದ್ದಾನೆ.

197. ಪ್ರತಿ ವರ್ಷ ಮಾರ್ಚ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವೆಂದು ಆಚರಿಸಲು ಕಾರಣವೇನು?

- ಅಮೇರಿಕದ ಅಂದಿನ ಅಧ್ಯಕ್ಷ ಕೆನಡಿಯವರು ಅಲ್ಲಿನ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ & ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕ ಅಂಗೀಕರಿಸಿದರು.

198. ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶವೇನು?

- ಆರೋಗ್ಯಕರ ಸ್ಪರ್ಧೆಯೊಂದಿಗೆ ಯೋಗ್ಯ ಬೆಲೆಗೆ ಉತ್ತಮ ಗುಣಮಟ್ಟದ ವಸ್ತು & ಸೇವೆ ದೊರೆಯುವಂತೆ ಮಾಡುವುದು.

199. ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿಯಿಂದ ಭಾರತೀಯರು ಮತ್ತು ಬ್ರಿಟಿಷರ ನಡುವಿನ ಅಂತರ ಕಡಿಮೆಯಾಯಿತು. ಹೇಗೆ?

- ಭಾರತೀಯರು ಬ್ರಿಟಿಷರ ಬಗ್ಗೆ ತಿಳಿದಿರುವ ಅಭಿಪ್ರಾಯಗಳನ್ನು ತಿಳಿಯಲು ಭಾರತೀಯರಿಗೆ ಪ್ರಾತಿನಿಧ್ಯ ನೀಡಲಾಯಿತು.

200. ಭಾರತದ ಆಡಳಿತ ವ್ಯವಸ್ಥೆಯಲ್ಲಿ 73ನೇ ತಿದ್ದುಪಡಿಯು ಒಂದು ಪ್ರಮುಖ ಮೈಲುಗಲ್ಲಾಗಿದೆ.ಏಕೆ?

- ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದಿತು.